ಇಲ್ಲ ಕೊಟ್ಟಿಲ್ಲ. ಜೊತೆಗೆ ಜನತಾ ಹೌಸಿಂಗ್ ಸ್ಕೀಂನವರು ಇವರಿಗೆ ಪ್ರಿಯಾರಿಟಿ ಕೊಡಬೇಕಾಗಿತ್ತು. ಅದನ್ನೂ ನಹ ಕೊಟ್ಟಿಲ್ಲ. ಇವರಿಗೆ ವನತಿ ಸೌಕರ್ಯ ಇಲ್ಲದೆ ನಪ್ಪಕ್ಕೆ ಒಳಗಾಗಿರುವುದು ಬಹಳ ವಾಗಿರುವುದರಿಂದ ನಮಾಜ ಕಲ್ಯಾಣ ಇಲಾಖೆಯವರು ಮತ್ತು ಜನತಾ ಹೌಸಿಂಗ್ ಯೋಜನೆಯಿಂದ ಸಹಾಯ ದೊರಕುವಂತೆ ಮಾಡುತ್ತೀರಾ?

ಶ್ರೀ ಎನ್. ಚಿಕ್ಕೇಗೌಡ.—ಈ ವಿಷಯವನ್ನು ನಾವು ಸಹಾನುಭೂತಿಯಿಂದ ಪರಿಶೀಲಿಸಿ, ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡುವುದಕ್ಕೆ ಮನನ್ನು ಮಾಡುತ್ತೇವೆ.

(*iii*) *re : Construction of water conductor systems in Chakra Project —Procedure adopted by local Authorities*

SRI KONANDUR LINGAPPA (Tairthahalli).—I call the attention of the Minister for Public Works to the procedure adopted by local authorities to take possession of lands for the construction of the two water conductor systems in Chakra Project.

SRI N. CHICKE GOWDA (Minister for Agriculture & Animal Husbandry) Sir, on behalf of Minister for Public Works, I wish to make the following statement.

The lands in question are lands required for the construction of the two water conductor systems in Chakra Project. Proposals for the acquisition of the above lands have already been forwarded by the Mysore Power Corporation Limited to the Deputy Commissioner, Shimoga District who, in turn, has requested the Tahsildar, Hosanagar for necessary action in the matter.

2. Meanwhile, individual written consents of the owners of lands coming under these water conductor systems have been obtained to the effect that the land may be taken over by the Corporation with immidiate effect if the Corporation is agreeable to pay crop compensation as determined by the Thasildar from the date of taking over the land till the payment of land compensation. The consent letters have been countersigned by the Tahsildar. The Tahsildar has begun inspection of the lands for fixing crop compensation from 6-4-1976. As soon as the amount is fixed it will be disbursed to the owners of land. In the mean time the date of taking over is being fixed and the owners have been informed both in writing any by 'Tom-Tom' that they should not cultivate the lands.

3. The procedure adopted by local authorities to take possession of the required lands pending acquisition of the same is not unusual and aims at completion of works as per schedule as the Chakra Project forms part of the Kudremukh Iron Ore Project.

ಶ್ರೀ ಕೋಣಂದೂರು ಲಿಂಗಪ್ಪ.—ಚಕ್ಕ ಪ್ರಾಜೆಕ್ಟ್‌ಗಾಗಿ ಚಾನಲ್‌ಗಳನ್ನು ತೋಡುವಾಗ ಆ ಜಾಗದಲ್ಲಿ ಇದ್ದಂಥ ಬೆಳೆಗಳನ್ನು ಕೊಯ್ಯಲಿಕ್ಕೆ ಬಿಡದೆ ಚಾನಲ್ ತೆಗೆದರುವುದು ತಮ್ಮ ಗಮನಕ್ಕೆ ಬಂದಿದೆಯೇ? ರೈತರು ತಮ್ಮ ಹೊಲಗಳಲ್ಲಿ ಬೀಜಗಳನ್ನು ಹಾಕಲಿಕ್ಕೂ ಸಹ ಸಾಧ್ಯವಾಗಲ್ಲ. ಈ ರೀತಿಯಾದರೆ ಮುಂದೆ ಅವರ ಗತಿ ಏನು? ಇವರ ರಿಹ್ಯಾಬಿಲಿಟೇಷನ್ ಬಗ್ಗೆ ತಾವು ಏನಾದರೂ ಯೋಚನೆ ಮಾಡಿದ್ದೀರಾ?

ಶ್ರೀ ಎನ್. ಚಿಕ್ಕೇಗೌಡ.—ನಾವು ರೈತರ ಕನ್‌ಸೆಂಟ್ ಮೇಲೆ ಕ್ರಾಪ್ ಕಾಂಪನ್ಸೇಷನ್ ಕೊಡಬೇಕು ಎಂದು ಹೇಳಿ, ಪ್ರತಿಯೊಂದು ವಿಷಯಗಳನ್ನು ತಿಳಿದು ಒಂದು ಏರ್ಪಾಡನ್ನು ಮಾಡಿದ್ದೇವೆ. ಅವರ ಅನುಮತಿ ಇಲ್ಲದೇ ನಾವು ಯಾವುದನ್ನೂ ಮಾಡುವುದಿಲ್ಲ. ಇವರ ಪುನರ್‌ವ್ಯವಸ್ಥೆಗೆ ಬೇರೆ ಕಡೆ ಜಾಗವನ್ನು ಕಲ್ಪಿಸಿಕೊಡುತ್ತೇವೆ

ಶ್ರೀ ಕೋಣಂದೂರು ಲಿಂಗಪ್ಪ.—ರೈತರ ಅನುಮತಿ ತೆಗೆದುಕೊಂಡು ಚಾನಲ್ ತೋಡುವ ಕೆಲಸವನ್ನು ಮಾಡಿದ್ದೇವೆಂದು ಹೇಳುವ ಮಾತು ಸತ್ಯಕ್ಕೆ ದೂರವಾದದು. ನಾನು ಅಲ್ಲಿಗೆ ಹೋಗಿ ಸಂಬಂಧಪಟ್ಟ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಮೇಲೆ ಇಂಜನಿಯರುಗಳು ಕ್ರಮ ತೆಗೆದುಕೊಂಡಿದ್ದಾರೆ. ಮತ್ತು ಆಮೇಲೆ ರೈತರ ಅನುಮತಿಯನ್ನು ತೆಗೆದುಕೊಂಡಿದ್ದಾರೆ. ಸ್ಥಳಕ್ಕೆ ಚೀಫ್ ಇಂಜನಿಯರ್ ಅವರು ಬಂದಮೇಲೆ ರಿಹ್ಯಾಬಿಲಿಟೇಟ್ ಮಾಡುವ ವ್ಯವಸ್ಥೆ ಮಾಡುವುದಾಗಿ ಹೇಳಿದ್ದಾರೆ. ತೀರ್ಥಹಳ್ಳಿ ಹೊಸನಗರ ಇತ್ಯಾದಿ ಮಲೆನಾಡು ಪ್ರದೇಶಗಳು ಅಲ್ಲಿ ಅನೇಕ ಪ್ರಾಜೆಕ್ಟ್‌ಗಳು ಬಂದಿರುವುದರಿಂದ ರೈತರ ಒಳ್ಳೆಯ ಜಮೀನುಗಳು ಮುಳುಗಡೆಯಾಗಿವೆ ವರಾಹಿ ಯೋಜನೆ ಕುದುರೆಮುಖ ಪ್ರಾಜೆಕ್ಟ್ ಚಕ್ಕ ಪ್ರಾಜೆಕ್ಟ್, ಇವುಗಳು ಬಂದಿದ್ದರಿಂದ ಅನೇಕ ಊರುಗಳು. ಜಮೀನುಗಳು ಮುಳುಗಡೆಯಾಗಿವೆ. ತರುವಾಯ ಪ್ರಾಜೆಕ್ಟ್ ಬಂದಾಗ ಮುಳುಗಡೆಯಾದಂಥ ರೈತರ ಜಮೀನಿಗೆ ಪುನರ್ ವ್ಯವಸ್ಥೆಯಾಗಿಲ್ಲ. ಹೀಗಿರಬೇಕಾದರೆ, ಚಕ್ಕ ವರಾಹಿ ಪ್ರಾಜೆಕ್ಟ್‌ನಲ್ಲಿ ಮುಳುಗಡೆಯಾದಂಥ ಜಮೀನಿನ ರೈತರ ಗತಿ ಏನು? ಅವರ ಪುನರ್ ವ್ಯವಸ್ಥೆಗೆ ಮೊದಲು ಕ್ರಮ ತೆಗೆದುಕೊಂಡು, ಇವಕ್ಕೆ ಒಂದು ಸಮಿತಿಯನ್ನು ನೇಮಕಮಾಡಿ ಈ ಕೆಲಸವನ್ನು ಏಕೆ ಮಾಡಬಾರದು? ಬಾಗ ಬೇಕಾದರೆ ನಾವು ತೋರಿಸಿಕೊಡುತ್ತೇನೆ. ಶಿವಮೊಗ್ಗ ಸಕ್ಕರೆ ಕಾರ್ಖಾನೆಗೆ ಸೇರಿದ ಸ್ವಲ್ಪ ಜಮೀನು ಇದೆ. ಅದನ್ನು ರೈತರಿಗೆ ಕೊಡಿ ನಾವು, ನಮ್ಮನ್ನೇ ಆರ್ಪಣ್ ಮಾಡಿಕೊಂಡು ಈ ರಾಜ್ಯಕ್ಕೆ ಶಕ್ತಿ ಮೀರಿ ಬೆಳಕನ್ನು ಕೊಡುತ್ತಿದ್ದೇವೆ. ಆರ್ಪಣ್ ಮಾಡಿಕೊಂಡು ಜನಗಳಿಗೆ ಭೂಮಿಕೊಡಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯ ವಶದಲ್ಲಿ ಸ್ವಲ್ಪ ಜಮೀನು ಇದೆ, ಅದನ್ನು ತಕ್ಷಣ ಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರು ಮುಳುಗಿ ಮುಳುಗಿ ಏಳು ಏಳುತ್ತಿಲ್ಲ; ತೇಲಿ ಕೊಂಡೇ ಬಂದಿದ್ದಾರೆ. ಮುಳುಗಡೆ ಜಮೀನಿನವರಿಗೆ ಬೇರೆ ಜಮೀನು ಕೊಡುವುದು ಸರ್ಕಾರದ ಉದ್ದೇಶ. ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ತೇಲುತ್ತಿದ್ದಾರೆ. ಅವರು ಮುಳುಗುವುದಕ್ಕೆ ಅವಕಾಶ ಕೊಡುವುದಿಲ್ಲ. ಅಣೆಕಟ್ಟುಗಳನ್ನೂ ಮತ್ತು ಯೋಜನೆಗಳನ್ನು ಕೈಗೊಂಡಾಗ ಜಮೀನು ಮುಳುಗಡೆಯಾಗುವುದು ಸಹಜ. ಶಿವಮೊಗ್ಗ ಸಕ್ಕರೆ ಕಾರ್ಖಾನೆಯಲ್ಲಿ ಸೆರ್ಪ್ಲಸ್ ಲ್ಯಾಂಡ್ ಇದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ನೋಡೋಣ. ಜಮೀನು ಇಲ್ಲದವರಿಗೆ ಜಮೀನು ಕೊಡುವುದು ಸರ್ಕಾರದ ಮೂಲ ಉದ್ದೇಶವಿರುವುದರಿಂದ, ಮಾನ್ಯ ಸದಸ್ಯರು ಭಯಪಡಬೇಕಾಗಿಲ್ಲ ಎಂದು ಹೇಳಬಯಸುತ್ತೇನೆ.

THE WAKFS KARNATAKA AMENDMENT BILL, 1974

Motion to Consider

(Debate Continued)

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ವಕ್ಫ್ ಧರ್ಮ ಸಂಸ್ಥೆಗಳಿಗೆ ರಿಯಾಯಿತಿ ಕೊಡುವ ಬಗ್ಗೆ ತಿದ್ದುಪಡಿ ವಿಧೇಯಕವೊಂದನ್ನು ಮಾನ್ಯ ಸಚಿವರು ಸಭೆಯ ಮುಂದೆ ಒಪ್ಪಿಗೆಗಾಗಿ ಮಂಡಿಸಿದ್ದಾರೆ. ಇದಕ್ಕೆ ನನ್ನ ಬೆಂಬಲವನ್ನು ಸೂಚಿಸಿ, ಎರಡು